(SRI P. ANJANAPPA)

(*c*) whethar the P. W. D. will form the road from Valluru in Pavagada taluk to Venkatammanahalli;

(*d*) whether the P. W. D. will form the road from Dommakapuri in Pavagada taluk to Garalligatta ?

Sri BASAVARAJ MAGAVI (Deputy Minister for Public Works).—

(*a*) This will be considered.

(*b*), (*c*) and (*d*) No, since these roads are not P.W.D. roads.

ಶ್ರೀ ಪಿ. ಆಂಜನಪ್ಪ.—ಈ ರಸ್ತೆಗಳು ಲೋಕೋಪಯೋಗಿ ಇರಾಖೆಗೆ ಸೇರಿದವುಗಳಲ್ಲ ವಾದ್ದರಿಂದ ಮಾಡಿಸಲಾಗುವುದಿಲ್ಲ ಎಂದು ಉತ್ತರ ಹೇಳಿದೆ. ಹಾಗಾದರೆ ಈ ತಾಲ್ಲೂಕಿನಲ್ಲಿ ಯಾವ ರಸ್ತೆ ಇಲ್ಲವೇ ?

† ಶ್ರೀ ಬಸವರಾಜ ಮಾಗಾವಿ.—ಎಲ್ಲ ರಸ್ತೆಗಳು ತಾಲ್ಲೂಕ ಬೋರ್ಡ ರಸ್ತೆಗಳಾಗಿವೆ.

ಶ್ರೀ ಜಿ. ರಾಮೇಗೌಡ.—ಇದನ್ನು ಪರಿಶೀಲನೆಯಾಗುವುದು ಎಂದು ಹೇಳಿದ್ದೀರಿ. ಹಾಗಾದರೆ ಪರಿಶೀಲನೆ ಮಾಡಿ ಪಿ. ಡಬ್ಲ್ಯೂ. ಡಿ. ಗೆ ಸೇರಿಸುವುದಕ್ಕೆ ಯಾವಾಗ ಪ್ರಯತ್ನ ಮಾಡುತ್ತೀರಿ ?

ಶ್ರೀ ಬಸವರಾಜ ಮಾಗಾವಿ.—ಈಗಾಗಲೇ 11,145 ಮೈಲಿ ರಸ್ತೆ ಪಿ. ಡಬ್ಲ್ಯೂ. ಡಿ. ತೆಗೆದುಕೊಂಡಿರುವುದು ನುವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗಿಲ್ಲ ಹಾಗು ಅದಕ್ಕೆ ಬೇಕಾಗುವ ಹೆಚ್ಚಿನ ಹಣ ಇಲ್ಲ, ಆದುದರಿಂದ ಪರಿಶೀಲನೆಯಾಗುವುದು ಎಂದು ಹೇಳಿದೆ. ಮುಖ್ಯವಾಗಿ ಹಣ ದೊರೆತರೆ ಈ ರಸ್ತೆ ತೆಗೆದುಕೊಳ್ಳಬೇಕು ಎನ್ನುವುದನ್ನು ಪರ್ಯಾಲೋಚಿಸುತ್ತಿದ್ದೇವೆ. ತೀವ್ರ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ.

ಒಬ್ಬ ಮಾನ್ಯಸದಸ್ಯರು.—ಸಾಗರ ತಾಲ್ಲೂಕಿನಲ್ಲಿ ಎಷ್ಟು ಮೈಲಿ ರಸ್ತೆ ತೆಗೆದುಕೊಂಡಿದೆ ?

ಶ್ರೀ ಬಸವರಾಜ ಮಾಗಾವಿ.—ಈ ಮಾಹಿತಿ ನನ್ನ ಹತ್ತಿರ ಇಲ್ಲ. ಬೇರೆ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

Sri H. M. CHANNABASAPPA.—In the matter of taking over of roads to P. W. D. for maintenance, have the Government prescribed any norms ?

Sri BASAVARAJ MAGAVI.—Yes, it depends upon the importance of the roads, tourist traffic, and such other things. The fact is now since we have taken more than 1145 miles to the possession of the P. W. D. and we are not in a position to bring them to our standard, we have withheld further taking over of roads till such time we are able to bring these roads to a particular specification.

Allotment of Central aid under Agricultural Development Programme in Tumkur District

146. Sri G. T. GOVINDA REDDY (Madhugiri). —

Will the Minister for Development be pleased to state :—

(*a*) the taluk of Tumkur District to which the Centeral financial aid for giving loans to ryots for wells and pumpsets as per the Agricultural Development Programme, is applicable ;

(*b*) whether efforts will be made to make it applicable to the entire district ?

Sri B. L. GOWDA (Deputy Minister for Co-operation).—

(*a*) The scheme to dig irrigation wells and set up pumpsets in Koratagere, Tumkur and Gubbi taluks of Tumkur District with the aid of Agricultural Refinance Corporation has been sanctioned.

(*b*) A proposal to extend this scheme to Sira, Madhugiri and Pavagada taluks of Tumkur District has been sent for the consideration of the Agricultural Refinance Corporation.

As the digging of irrigation wells depend upon the availability of water in the land, there is no proposal at present to extend the said scheme to the remaining taluks of the district.

ಶ್ರೀ ಜಿ. ಟಿ. ಗೋವಿಂದರೆಡ್ಡಿ.—ಈ ಯೋಜನೆಯನ್ನು ತುಮಕೂರು ಜಿಲ್ಲೆಯ ಸಿರಾ ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳಿಗೆ ವಿಸ್ತರಿಸುವ ನಲಕೆಯನ್ನು ಅಗ್ರಿಕಲ್ಚರಲ್ ರಿಫೈನಾನ್ಸ್ ಕಾರ್ಪೋರೇಷನ್ನಿಗೆ ಪರಿಶೀಲನೆಗೆ ಕಳುಹಿಸಲಾಗಿದೆ ಎಂದು ಉತ್ತರ ಹೇಳಿದೆ. ಅದನ್ನು ಕಳುಹಿಸಿ ಎಷ್ಟು ದಿವಸವಾಯಿತು ?

† ಶ್ರೀ ಬಿ. ಎಲ್. ಗೌಡ.—ಅಕ್ಟೋಬರ್ ತಿಂಗಳಿನಲ್ಲಿ ಕಳುಹಿಸಿದೆ.

ಶ್ರೀ ಜಿ. ಟಿ. ಗೋವಿಂದರೆಡ್ಡಿ.—ಈ ಮೂರು ತಾಲ್ಲೂಕುಗಳನ್ನು ಸೇರಿಸಲು ಜಾಗ್ರತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಪರಿಶೀಲನೆಗೆ ಕಳುಹಿಸಿದ್ದು ಬಂದ ತಕ್ಷಣ ಮಾಡುತ್ತೇವೆ.

ಶ್ರೀ ಎಂ. ಎನ್. ರಾಮಣ್ಣ.—ಗುಬ್ಬಿ ತಾಲ್ಲೂಕಿನಲ್ಲಿ ಇದನ್ನು ತೆಗೆದುಕೊಂಡಿಲ್ಲ ಆದ್ದರಿಂದ ಒಂದಾದರೂ ತೆಗೆದುಕೊಳ್ಳಲು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಇದಕ್ಕೆ ಒಂದು ನಿಯಮ ಇದೆ. ಭೂಗರ್ಭದಲ್ಲಿ ನೀರು ಹೆಚ್ಚಾಗಿ ಇರಬೇಕು. ಈ ಬಗ್ಗೆ ತನಿಖೆ ಮಾಡಿ ರಿಪೋರ್ಟ್ ಕೊಡುತ್ತಾರೆ ಅದರ ಆಧಾರದ ಮೇಲೆ ಮಾಡಬೇಕಾಗುತ್ತದೆ. ಪರಿಶೀಲನೆಗೆ ಕಳುಹಿಸಿಕೊಟ್ಟು ಅಲ್ಲಿ ನೀರು ಇದೆ ಎಂದು ಶಿಫಾರಸು ಮಾಡಿದರೆ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ನಾಗಪ್ಪ.—ಭೂಗರ್ಭದಲ್ಲಿ ನೀರು ಇದೆ ಇಲ್ಲಾ ಎನ್ನುವುದನ್ನು ಪರಿಶೀಲನೆ ಮಾಡಿದ ಮೇಲೆ ಕೆಲಸ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಹಾಗಾದರೆ ಇಡೀ ರಾಜ್ಯದಲ್ಲಿ ಸರ್ವೇ ಮಾಡಿಸಿದ್ದೀರಾ ? ರಿಪೋರ್ಟ್ ಬಂದಿರುವ ಪ್ರಕಾರ ಕೆಲಸ ತೆಗೆದುಕೊಳ್ಳಲು ಒಪ್ಪಿಕೊಂಡಿದ್ದೀರಾ ?

ಶ್ರೀ ಬಿ. ಎಲ್. ಗೌಡ.—ಒಂದು ರಿಪೋರ್ಟು ಬಂದಿದೆ. ಇನ್ನೊಂದು ರಿಪೋರ್ಟ್ ಬರುವುದರಲ್ಲಿ ಇದೆ.

ಶ್ರೀ ಎಂ. ಎನ್. ರಾಮಣ್ಣ.—ತುಮಕೂರು ಜಿಲ್ಲೆಯಲ್ಲಿ ಎಲ್ಲೆಲ್ಲಿ ನೀರು ಇದೆ ಎನ್ನುವುದಕ್ಕೆ ರಿಪೋರ್ಟ್ ತರಿಸುವದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ತುಮಕೂರು ಬಗ್ಗೆ ರಿಪೋರ್ಟ್ ತಯಾರಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕುಣಿಗಲ್ ತಾಲ್ಲೂಕಿನಲ್ಲಿ ಪರಿಶೀಲನೆ ಮಾಡಿಸುತ್ತೀರಾ ? ಪ್ರಶ್ನೆ ಮಾಡಿಸಿದೆ ಉತ್ತರ ಹೇಳಿದಹಾಗೆ ಇದೆ. ಆದುದರಿಂದ ಉಳಿದ ತಾಲ್ಲೂಕಿನ ಬಗ್ಗೆ ಪರಿಶೀಲನೆ ನಡೆಸಿ ಈ ಯೋಜನೆ ಕೈಗೊಳ್ಳಲು ಪ್ರಯತ್ನಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ದೊಡ್ಡಬೋರೆಗೌಡ.—ಈ ಯೋಜನೆ ಪೂರ್ತಿಯಾಗುವುದಕ್ಕೆ ಎಷ್ಟು ಅವಧಿ ಬೇಕಾಗುತ್ತದೆ ಹೇಳುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಭೂಗರ್ಭದಲ್ಲಿ ನೀರು ಇದ್ದರೆ ಅದಕ್ಕೆ ಬೇಕಾಗುವ ಹಣ ಇದ್ದರೆ ಇದನ್ನು ಮಾಡುತ್ತೇವೆ. ಇಷ್ಟೆ ದಿವಸಗಳಲ್ಲಿ ಮಾಡುತ್ತೇವೆ ಎಂದು ಹೇಳಲು ಆಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ನೀರಾವರಿ ಭಾಷಿ ತೋಡುವ ಯೋಜನೆ ಭೂಗರ್ಭದಲ್ಲಿ ದೊರೆಯುವ ನೀರನ್ನು ಅವಲಂಬಿಸಿದೆ. ನೀರು ಎಲ್ಲಿ ಸಿಕ್ಕುತ್ತದೆ ಎನ್ನುತಕ್ಕಂಥಾದ್ದನ್ನು ಪರೀಕ್ಷೆ ಮಾಡತಕ್ಕಂಥ ಮಾರ್ಗಗಳು ಯಾವುವು ? ಕಡ್ಡೀ ಹಿಡಿದು ನೋಡುವ ಶಾಸ್ತ್ರವನ್ನು ಪರಿಗಣಿಸುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಈಗಾಗಲೇ ಇದಕ್ಕೆ ಉತ್ತರ ಹೇಳಿದ್ದೇನೆ.

ಶ್ರೀ ಜಿ. ಟಿ. ಗೋವಿಂದರೆಡ್ಡಿ.—ಇಡೀ ತಾಲ್ಲೂಕಿನಲ್ಲಿ ಈ ಯೋಜನೆ ಅನ್ವಯಿಸುವ ಹಾಗೆ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಅದಕ್ಕೆ ಉತ್ತರ ಹೇಳಿದ್ದೇನೆ. ಭೂಗರ್ಭಇರಾಖೆಯವರು ಎಲ್ಲಿ ನೀರು ದೊರೆಯುತ್ತದೆ ಎಂದು ಶಿಫಾರಸು ಮಾಡುತ್ತಾರೋ ಅಂಥ ಜಾಗದಲ್ಲಿ ಈ ಯೋಜನೆ ತೆಗೆದು ಕೊಳ್ಳುತ್ತೇವೆ. ಶ್ರೀಮಾನ್ ಗೋವಿಂದರೆಡ್ಡಿಯವರೇ ಆಗಲಿ ಅಥವಾ ಯಾರೇ ಸದಸ್ಯರಾಗಲಿ ಇಂಥ ಒಂದು ಜಾಗದಲ್ಲಿ ನೀರು ಬರುತ್ತದೆ ಎಂದು ಸಲಹೆ ಕೊಟ್ಟರೆ ಅಲ್ಲಿ ಪರಿಶೀಲನೆ ಮಾಡುತ್ತೇವೆ.

9-00 A.M.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ತುಮಕೂರು ಜಿಲ್ಲೆಯಲ್ಲಿ 3 ರಿಂದ 23 ಪರ್ಸೆಂಟಿನವರೆಗೆ ಕಡಿಮೆಯಾಗಿರುವುದು 4-6 ತಾಲ್ಲೂಕುಗಳಿವೆ. ಅಂತಹ ಕಡೆ ಪ್ರಯಾರಿಟಿ ಕೊಟ್ಟು ಇರ್ರಿಗೇಷನ್ ವೆಲ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಇರ್ರಿಗೇಷನ್ ಈ ವರ್ಷ ಕಡಿಮೆ ಎನ್ನುವುದನ್ನು ಒಪ್ಪುತ್ತೇನೆ. ಮಾನ್ಯ ಸದಸ್ಯರು ಹೇಳಿದ ಒಂದು ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

State Fund Road in Chickmagalur District

151. Sri M. MALLAPPA (Birur).—

Will the Minister for Public Works be pleased to state :—

(*a*) the number of miles of road that have been taken over in Chickmagalur District as State Fund Roads (Talukwise details may be given for the past three years);

(*b*) the number of roads taken over as State Fund Roads that have been metalled and the amount spent for the said State Fund roads ;

(*c*) the number of years in which the Government would complete metalling all the roads converted as State Fund Roads in Chickmagalur District ?

Sri K. LAKKAPPA (Minister for Public Works).—

(*a*)— *Name of Taluka* | *Years*

	1966 M. F.	*1967* M. F.	*1968* M. F.
1. Chickmagalur	...	21-2	7-6
2. Kadur	...	...	24-0
3. Mudigere	...	...	6-2
4. Koppa	...	4-4	...
5. N. R. Pura	...	4-4	21-0